

# ಆ ರತ್ನ, ಈ ರತ್ನ ಎನ್ನುತ ಬೀಗಲು ಬೇಡ... ಕೊರಗಲು ಬೇಡ...

ಮಹಿಳಾ ಸಂಘದಿಂದ 'ಮಹಿಳಾ ರತ್ನ' ಸನ್ಮಾನ ಸ್ವೀಕರಿಸಲು ಗತ್ತಿನಿಂದ ಹೊಗಬೇಕೆಂದು ಏನೇನೋ ತಯಾರಿ ಮಾಡಿಕೊಂಡರೆ, ಅಲ್ಲಿ ಆಗಿದ್ದೇ ಬೇರೆ...

■ ವೇದಾವತಿ ಹೆಚ್.ಎಸ್.
ಕಲೆ: ಸಂತೋಷ್ ಸಸಿಹಿತ್ಲು

ಅದೊಂದು ದಿನ ಅಡುಗೆಮನೆಯಲ್ಲಿ ಹೊಸ ರುಚಿಯೊಂದನ್ನು ಸಂಶೋಧನೆ ಮಾಡುತ್ತಿದ್ದೆ. ಹೊಸ ರುಚಿಯ ಮೊದಲನೇ ಪ್ರಯೋಗ ಎಂದಿನಂತೆ ಅಂದು ಕೂಡ ನನ್ನ ಗಂಡ ಮತ್ತು ಮಕ್ಕಳ ಮೇಲೆ ನಡೆಯುತ್ತಿತ್ತು. ಕಷ್ಟಪಟ್ಟು ಕಂಡುಹಿಡಿದ ಹೊಸ ರುಚಿಯನ್ನು ನನ್ನ ಮನೆಯವರು ಇಷ್ಟಪಟ್ಟರೆ ಮಾತ್ರ, ಮುಂದಿನ ದಿನಗಳಲ್ಲಿ ಬೇರೊಬ್ಬರಿಗೆ ಅದರ ರುಚಿ ತೋರಿಸಲು ಸರಿ ಎಂದು ಆ ಹೊಸ ರುಚಿಗೆ ಏನೇನು ಪದಾರ್ಥಗಳು, ಎಷ್ಟೆಷ್ಟು ಬೇಕೆಂದು ಸರಿಯಾದ ಅಳತೆಯೊಂದಿಗೆ ತಯಾರಿಸುವ ವಿಧಾನವನ್ನು ನನ್ನ ಫೋನಿನಲ್ಲಿ ಫೋಟೊ ತೆಗೆದು ಇಟ್ಟುಕೊಳ್ಳುತ್ತಿದ್ದೆ.

ಇನ್ನೇನು ಗಂಡ ಮತ್ತು ಮಕ್ಕಳು ಹೊಸ ರುಚಿಯನ್ನು ಸವಿದು ಅದರ ಗುಣಗಾನ ಮಾಡಬೇಕೆನ್ನುವಾಗಲೇ ಮನೆಯ ಕಾಲಿಂಗ್ ಬೆಲ್ ಸದ್ದು ಮಾಡಿತು. ಒಳ್ಳೆಯ ಸಮಯಕ್ಕೆ ಯಾರು ಬಂದಿರಬಹುದೆಂದು ನೋಡಲು ಬಾಗಿಲು ತೆರೆದಾಗ ಮಹಿಳಾಮಣಿಗಳ ದೊಡ್ಡ ಗುಂಪೊಂದು ನನಗೆ ಎದುರಾಗಿ ನಿಂತಿತ್ತು. ಇದುವರೆಗೂ ಅವರುಗಳ ಮುಖಗಳನ್ನು ಎಲ್ಲಿಯೂ ನೋಡೇ ಇರಲಿಲ್ಲ.

ಅವರ ಪರಿಚಯ ಕೂಡ ನನಗೆ ಇಲ್ಲದ ಕಾರಣ— ಯಾಕೆ ನಮ್ಮ ಮನೆಗೆ ಬಂದಿದ್ದಾರೆ, ಅವರೆಲ್ಲರೂ ಯಾರನ್ನು ಹುಡುಕಿಕೊಂಡು ಬಂದಿರಬಹುದೆಂದು ಯೋಚಿಸುವಷ್ಟರಲ್ಲಿ ಅವರಲ್ಲಿ ಒಬ್ಬ ಮಹಿಳೆ, ‘‘ಮೇಡಂ, ನೀವು ಬರೆದ ಕಥೆ, ಕವನ, ಅಡುಗೆ ಲೇಖನಗಳು ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ನಿಮ್ಮ ಅಡುಗೆ ಲೇಖನಗಳು ನಮಗೆ ತುಂಬಾ ಇಷ್ಟ. ಇಷ್ಟು ಲೇಖನಗಳನ್ನು ಬರೆದಿದ್ದರೂ ನಿಮಗೆ ಎಲ್ಲಿಯೂ ಗೌರವ, ಸನ್ಮಾನ, ಪ್ರಶಸ್ತಿ ಸಿಗದೇ ಇರುವುದು ನಮಗೆ ತುಂಬಾ ಬೇಸರ ತಂದಿದೆ. ಇದನ್ನೆಲ್ಲಾ ಪರಿಗಣಿಸಿ ನಮ್ಮ ಮಹಿಳಾ ಸಂಘ ಇದೇ ಭಾನುವಾರ 'ಮಹಿಳಾ ರತ್ನ' ಪ್ರಶಸ್ತಿಯನ್ನು ನಿಮಗೆ ನೀಡಿ ಗೌರವಿಸಬೇಕೆಂದು ತೀರ್ಮಾನ